ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 07.01.2025.

**ಪಾಟೀ ಸವಾಲುಃ** ವಾದಿ ಪರ ಶ್ರೀ ಎಸ್.ಕೆ.ಬಿ. ವಕೀಲರಿಂದಃ

ನನ್ನ ತಂದೆ ಗುಂಡಪ್ಪನಿಗೆ ನಾವು 4 ಜನ ಮಕ್ಕಳು ಇರುತ್ತೇವೆ, ಅವರೆಂದರೆ, ನಾನು, ವಿಠೋಬಾ, ಗುರುಲಿಂಗಪ್ಪ ಮತ್ತು ಹನುಮಂತರಾಯ ಇರುತ್ತೇವೆ. ನನ್ನ ತಂದೆ ತಿರಿಕೊಂಡು ಸುಮಾರು 35 ವರ್ಷವಾಗಿರುತ್ತದೆ. ನನ್ನ ತಂದೆ ತಿರಿಕೊಂಡ ನಂತರ ನಾನು ಮತ್ತು ನನ್ನ ಅಣ್ಣ-ತಮ್ಮಂದಿರು ನಮ್ಮ ಕುಟುಂಬದ ಸ್ವತ್ತುಗಳನ್ನು ಹಂಚಿಕೆ ಮಾಡಿಕೊಂಡಿರುತ್ತೇವೆ. 1ನೇ ಪ್ರತಿವಾದಿ ಚಿಕ್ಕವನು ಇರುವಾಗಿನಿಂದ ಕಲಬುರಗಿಯಲ್ಲಿಯೇ ಇರುತ್ತಿದ್ದ ಎಂದರೆ ಸರಿ. 1ನೇ ಪ್ರತಿವಾದಿ ಮದುವೆಯಾಗುವಕ್ಕಿಂತ ಮುಂಚೆ ಕಲಬುರಗಿಯಲ್ಲಿಯೇ ಇರುತ್ತಿದ್ದ ಎಂದರೆ ಸರಿಯಲ್ಲ. ಮದುವೆಯಾದ ಒಂದು ವರ್ಷಕ್ಕೆ 1ನೇ ಪ್ರತಿವಾದಿ ಕಲಬುರಗಿಗೆ ಹೋಗಿರುತ್ತಾರೆ ಎಂದರೆ ಸರಿ. 1ನೇ ಪ್ರತಿವಾದಿ ಕಲಬುರಗಿಗೆ ಹೋದ ನಂತರ ಆತನ ಜಮೀನನ್ನು ನಾನೇ ಮಾಡುತ್ತಿದ್ದೆ ಎಂದರೆ ಸರಿಯಲ್ಲ.

1ನೇ ಪ್ರತಿವಾದಿಯ ಸ್ವತಃ ಒಕ್ಕಲುತನ ಇರಲಿಲ್ಲ, ಬೇರೆಯವರಿಂದ ಮಾಡಿಸುತ್ತಿದ್ದ. 1ನೇ ಪ್ರತಿವಾದಿ ಬಹಳ ದಿನಗಳಿಂದ ಮದ್ಯಪಾನ ಮಾಡುವುದು ಕಲಿತಿದ್ದ ಎಂದರೆ ಸರಿ. 1ನೇ ಪ್ರತಿವಾದಿ 2000ನೇ ಸಾಲಿನಿಂದ ಮದ್ಯಪಾನ ಮಾಡುವುದನ್ನು ಕಲಿತಿದ್ದ ಎಂದರೆ ಅದು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ ಮದ್ಯಪಾನ ಮಾಡುವುದು ನನಗೆ ಗೊತ್ತು ಅದು ಸುಮಾರು 8-10 ವರ್ಷಗಳಿಂದ ಗೊತ್ತಾಗಿರುತ್ತದೆ. ನನಗೆ 1ನೇ ಪ್ರತಿವಾದಿ ಮದ್ಯಪಾನ ಮಾಡುವುದು ಸುಮಾರು 20 ವರ್ಷಗಳ ಹಿಂದೆನೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ 10ನೇ ತರಗತಿವರಗೆ ಶಾಲೆ ಕಲಿತಿರುತ್ತಾನೆ ಎಂದರೆ ಸರಿ. ನಂತರ 1ನೇ ಪ್ರತಿವಾದಿ ಪದವಿ ವರೆಗೂ ಶಾಲೆ ಕಲಿತಿರುತ್ತಾನೆ ಎಂದರೆ ಸರಿ. 1ನೇ ಪ್ರತಿವಾದಿ ಇಂಗ್ಲೀಷ್‌ನಲ್ಲಿ ಸಹಿ ಮಾಡುತ್ತಾನೆ ಎಂದರೆ ನನಗೆ ಗೊತ್ತಿಲ್ಲ.

ಸರ್ವೆ ನಂ.18 ಇದು ನಮ್ಮ ಕುಟುಂಬದ ಹಿರಿಯರ ಸ್ವತ್ತು ಎಂದರೆ ಸರಿ. ಅದರಲ್ಲಿ ಎಲ್ಲರೂ ನಾವು ಪಾಲು ಮಾಡಿಕೊಂಡಿರುತ್ತೇವೆ ಎಂದರೆ ಸರಿ. ನಿಡಿ-1ರ ಕಾಲಕ್ಕೆ ಕೂಡಾ 1ನೇ ಪ್ರತಿವಾದಿ ತುಂಬಾ ಮದ್ಯಪಾನ ಮಾಡುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ನಿಡಿ-1ರ ಕಾಲಕ್ಕೆ ವಾದಿ ಚಿಕ್ಕವಳು ಇದ್ದಳು ಎಂದರೆ ನನಗೆ ಗೊತ್ತಿಲ್ಲ. ನಿಡಿ-1ರ ಮೂಲ ಕ್ರಯ ಪತ್ರ ಎಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ ಹಾಗೂ ಎಲ್ಲಿ ಕಳೆದಿದೆ ಎಂದು ಕೂಡಾ ಗೊತ್ತಿಲ್ಲ. ನಿಡಿ-1ರಲ್ಲಿ ಹೆಸರು ಹಾಕಿ ತಿದ್ದುಪಡೆ ಮಾಡಿರುತ್ತಾರೆ ಎಂದರೆ ಸರಿ. ಸದರಿ ತಿದ್ದುಪಡೆಯನ್ನು ಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಡಿ-1ರಲ್ಲಿ 1ನೇ ಪ್ರತಿವಾದಿ ಸಹಿ ಇಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಇವತ್ತಿನವರೆಗೂ ಬಟಾಯಿ ಮೂಲಕ ದಾವಾ ಜಮೀನನ್ನು ಸಾಗುವಳಿ ಮಾಡಲು ಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ಮೊದಲು 8-10 ವರ್ಷ ಪಾಲು ಕೊಟ್ಟು ಮುಂದೆ ನಾನು ಪಾಲನ್ನು ಕೊಡುವುದು ಬಿಟ್ಟಿರುತ್ತೇನೆ ಎಂದರೆ ಸರಿಯಲ್ಲ.

1ನೇ ಪ್ರತಿವಾದಿ ಕಲಬುರಗಿಯಲ್ಲಿ ಹೋಟೇಲ್‌ಗಳಲ್ಲಿ ಕೆಲಸ ಮಾಡುತ್ತಾನೆ ಎಂದರೆ ಸರಿ. ಆತನ ಹೆಂಡತಿ ಕೂಡಾ ಕೆಲಸ ಮಾಡಿಕೊಂಡು ಕುಟುಂಬ ಸಂರಕ್ಷಣೆ ಮಾಡಿಕೊಂಡು ಹೋಗುತ್ತಿದ್ದಾರೆ

ಎಂದರೆ ಸರಿ. 1ನೇ ಪ್ರತಿವಾದಿಗೆ ಜಮೀನನ್ನು ಮಾರಾಟ ಮಾಡುವ ಅವಶ್ಯಕತೆ ಏನು ಇತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಆತನಿಗೆ ಸಾಲ ಆಗಿತ್ತು ಆ ಕಾರಣ ಊರಿನವರಿಗೆ ಕೇಳಿದಾಗ ಯಾರೂ ಹೊಲ ತೆಗೆದುಕೊಳ್ಳಲಿಲ್ಲ, ಆ ಕಾರಣ ನಾನೇ ತೆಗೆದುಕೊಂಡೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಗೆ ಸಾಲ ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-1ರ ಸಾಕ್ಷಿದಾರರಾದ ವಿಠ್ಠಲ್ ರವರು ನನ್ನ ಅಣ್ಣನಾಗಬೇಕು, 2ನೇ ಸಾಕ್ಷಿದಾರರ ರಾಚಣ್ಣ ರವರು ನಮ್ಮ ಬೀಗರು ಆಗಬೇಕು ಹಾಗೂ 3ನೇ ಸಾಕ್ಷಿದಾರ ದೌಲತ್ ರಾವ್ ಪಾಟೀಲ್ ರವರು ಅಂಬಲಗಾ ಗ್ರಾಮದವರು ಇರುತ್ತಾರೆ, ಆತನ ನನ್ನ ಕಾಸಾ ಅತ್ತೆಯ ಮಗ ಇರುತ್ತಾರೆ.

ನಾವೆಲ್ಲ ಸೇರಿ ಸುಳ್ಳು ಕ್ರಯ ಪತ್ರ ಸೃಷ್ಠಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ ಹೊಲ ಮಾರಾಟ ಮಾಡುವ ಅವಶ್ಯಕತೆ ಇರಲಿಲ್ಲ, ನಾವೆಲ್ಲ ಸೇರಿ ನಿಡಿ-1ನ್ನು ಬನಾವಟ್ ಮಾಡಿರುತ್ತೇವೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ನನಗೆ ಸಾಲ ತಿರಿಸುವ ಸಲುವಾಗಿ ಹೊಲ ಮಾರಾಟ ಮಾಡಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ ಜಮೀನು ಹೊಡೆದು ಹಾಕುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ನಾನು ತಯಾರಿಸಿದ ಸುಳ್ಳು ಕ್ರಯ ಪತ್ರದ ಬಗ್ಗೆ ಗೊತ್ತಾದ ನಂತರ ಆತ ನನಗೆ ಜಮೀನಿನ ಕಬ್ಜೆಯನ್ನು ಕೊಡುವುದನ್ನು ನಿರಾಕರಿಸಿದ ನಂತರ, ನಾನು ಖೊಟ್ಟಿ ತಯಾರಿಸಿದ ಕ್ರಯ ಪತ್ರದ ಬಗ್ಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ.

ಸುಮಾರು 2 ತಿಂಗಳ ಹಿಂದೆ ನಾನು ಮತ್ತು ನನ್ನ ಮಗ ಕೂಡಿ 1ನೇ ಪ್ರತಿವಾದಿ ಮೇಲೆ ದೂರು ಕೊಟ್ಟಿರುತ್ತೇವೆ ಎಂದರೆ, ಸಾಕ್ಷಿ ಅವರು ಮದ್ಯಪಾನ ಮಾಡಿಕೊಂಡು ಬಂದು ಗಲಾಟೆ ಮಾಡಿದ್ದರಿಂದ ಹಾಗೂ ಜೀವ ಬೆದರಿಕೆ ಹಾಕಿದ್ದರಿಂದ ದೂರು ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ನನ್ನ ಮಗ

ಮಿಲಟರಿ ಸೇರಿ ಸಲ್ಲಿಸಿ ಬಂದಿರುತ್ತಾನೆ ಎಂದರೆ ಸರಿ. ಇನ್ನೊಬ್ಬ ಮಗ ಮಿಲಟರಿಯಲ್ಲಿ ಇರುತ್ತಾರೆ ಎಂದರೆ ಸರಿ. ನಾನು ಮತ್ತು ನನ್ನ ಮಗ ಸೇರಿ ಸುಳ್ಳು ದೂರು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮಕ್ಕಳು ಮಿಲಟರಿಯಲ್ಲಿರುವ ಕಾರಣ ಅದರ ದುರುಪಯೋಗಪಡಿಸಿಕೊಂಡು 1ನೇ ಪ್ರತಿವಾದಿ ವಿರುದ್ಧ ಸುಳ್ಳು ದೂರು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**